ದಿನಾಂಕ 12-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಕೆ. ಪಿ. ಕೆ. ಎಸ್ , ವಕೀಲರವರಿಂದಃ**

ನಾನು ಅರ್ಜಿದಾರರ ಪರ ಸಾಕ್ಷಿದಾರನಾಗಿರುತ್ತೇನೆ. ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.

ಅರ್ಜಿದಾರರಿಗೆ ಸಂಬಂದಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 23 ಎಂದು, 01 ಎಕ್ಸ್‌ರೇಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.24 ಎಂದು ಗುರುತಿಸಲಾಯಿತು. ಅರ್ಜಿದಾರರಿಗೆ ನೀಡಿದ ಚಿಕಿತ್ಸೆಯ ಪ್ರಮಾಣಪತ್ರವನ್ನು ಮತ್ತು ಅರ್ಜಿದಾರರ ಅಂಗನ್ಯೂನತಾ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ 20 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ.20(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎ. ಎಂ ವಕೀಲರಿಂದಃ**

ಕೇಸ್ ಶೀಟು ಹೊರ ರೋಗಿಗೆ ಸಂಬಂದಪಟ್ಟದ್ದು. ಎರಡು ಬಾರಿ ಹೊರ ರೋಗಿಯಾಗಿ ಬಂದಿರುತ್ತಾರೆ. ಪ್ರಥಮ ಬಾರಿ ಪ್ರಾಥಮಿಕ ಚಿಕಿತ್ಸೆ ಗದಗದಲ್ಲಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಗದಗದಲ್ಲಿ ಚಿಕಿತ್ಸೆ ಆದ 3 ತಿಂಗಳ ನಂತರ ಎಂದರೆ 23-11-2023 ರಂದು ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಆ ಸಮಯದಲ್ಲಿ ಸ್ವಲ್ಪ ವ್ಯಾಯಾಮ ಚಿಕಿತ್ಸೆ ನೀಡಿದ್ದೇನೆ. ನಾನು ವೈಯಕ್ತಿಕ ಚಿಕಿತ್ಸೆ ನೀಡಿರುವುದಿಲ್ಲ. 2 ನೇ ಬಾರಿ 14-08-2024 ರಂದು ವ್ಯಾಯಾಮ ಚಿಕಿತ್ಸೆ ಗೆ ಸಂಬಂದಪಟ್ಟಂತೆ ಬಂದಿರುತ್ತಾರೆ. 3 ನೇ ಬಾರಿ ನಿಪಿ 20 ಅಂಗನ್ಯೂನತೆಯ ಪ್ರಮಾಣ ಪತ್ರ ಪಡೆದುಕೊಳ್ಳಲು

ಬಂದಿರುತ್ತಾರೆ. ಕೈಯ ಚಲನವಲನ ಸ್ಪರ್ಶ ಜ್ಞಾನ ಮತ್ತು ಎಕ್ಸ್ರೇ ತೆಗೆದಿರುತ್ತೇನೆ. ಅರ್ಜಿದಾರರು 17 ವರುಷದ ಹುಡುಗ ಎಂದರೆ ಸರಿ. ಮೂರು ವರುಷ ಆಗಿರುವುದರಿಂದ ಸ್ಥಿರ ಅಂಗನ್ಯೂನತೆ ಸುದಾರಿಸಲು ಸಾಧ್ಯವಿಲ್ಲ. 20% ರೈಟ್ ಅಪ್ಪರ್ ಲಿಂಬಿಗೆ ಸಂಬಂದಿಸಿ ನೀಡಿರುತ್ತೇನೆ. ನಾನು ಸ್ಥಿರ ಅಂಗನ್ಯೂನತೆಯ ಪ್ರಮಾಣ ಪತ್ರ ನೀಡಲು ಗದಗ ಜಿಲ್ಲೆಯಿಂದ ಆಸ್ಪತ್ರೆಯ ದಾಖಲೆ ಪಡೆದುಕೊಂಡಿರುತ್ತೇನೆ. ಅರ್ಜಿದಾರರು ಅಪಘಾತ ಸಮಯದಲ್ಲಿ ಕೂಲಿ ಕಾರ್ಮಿಕನಾಗಿರುತ್ತಾನೆ. 20% ಅಂಗನ್ಯೂನತೆ ಯನ್ನು ಬಲಗೈಗೆ ಎಡಗೈ ತುಲನೆ ಮಾಡಿ ನೀಡಿರುತ್ತೇನೆ. ಅರ್ಜಿದಾರರು ಮುಖ್ಯವಾದ ಚಿಕಿತ್ಸೆ ಗದಗ ಜಿಲ್ಲೆಯಲ್ಲೇ ತೆಗೆದುಕೊಂಡ ಕಾರಣ ಅವರೇ ಬಂದು ಸಾಕ್ಷ್ಯ ನುಡಿಯಬೇಕಾಗುತ್ತದೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವಷ್ಟು ಅಂಗನ್ಯೂನ್ಯತೆ ಅರ್ಜಿದಾರರಿಗೆ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡಲು ನಿಪಿ 20 ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಅಂಗನ್ಯೂನತೆ ಯಿಂದ ಅರ್ಜಿದಾರರಿಗೆ ಕೂಲಿ ಕೆಲಸ ಮಾಡಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

1 ನೇಹೆ.ಹಿ.ಸಿ.ನ್ಯಾ.ಮತ್ತುಎಂ.ಎ.ಸಿ.ಟಿ.ಉಡುಪಿ.